ಅನ್ಯ ಮತಾವಲಂಬಿಗಳನ್ನಾಗಿ ಮಾಡುತ್ತಿದ್ದಾರೆ. ಇದರಿಂದ ಈ ನಾಡಿನಲ್ಲಿ ಎಲ್ಲ ಕಡೆ ಆತಂಕ, ಭಯ, ಅಶಾಂತಿ ಹರಡುತ್ತಿವೆ. ಒಂದು ಕಡೆ ಅನ್ಯಮತಗಳ ಹಾವಳಿ, ಇನ್ನೊಂದು ಕಡೆ ರಾಜಕೀಯ ಸಮಸ್ಯೆಗಳು. ಇಲ್ಲಿಯ ವಿದ್ಯಾವಂತರನ್ನು ಈ ಸಮಸ್ಯೆಗಳು ಬಾಧಿಸುತ್ತಿದ್ದರೂ ಅವರು ಏನೂ ಮಾಡಲಾರದವರಾಗಿದ್ದಾರೆ. ಆದರೆ ವಿದ್ಯಾಭ್ಯಾಸವೂ ಇಲ್ಲದ, ರಾಜಕೀಯ ಏನೆಂದು ಅರಿಯದ ಮುಗ್ಧ ಬಡಜನರು ತಮ್ಮ ಮೇಲೆ ನಡೆಯುತ್ತಿರುವ ಅತ್ಯಾಚಾರಗಳಿಂದ ಕಂಗೆಟ್ಟು, ಭಯದಿಂದಲೂ, ಆತಂಕದಿಂದಲೂ ದಿನಗಳನ್ನು ಕಳೆಯುತ್ತಿದ್ದಾರೆ. ಈ ಬಡಜೀವಿಗಳ ಮೊರೆಯನ್ನು ಯಾರು ಕೇಳಬಲ್ಲರು? ಭಾರತದ ಉಳಿದ ಭಾಗದಲ್ಲಿರುವ ಜನತೆ ಈ ಸ್ಥಳದ ನಿವಾಸಿಗಳು ಕಷ್ಟಪಡುವುದನ್ನು ಹೇಗೆ ಅರಿಯಬಲ್ಲರು? ಈ ನಾಡಿನ ಈಗಿನ ಪರಿಸ್ಥಿತಿ ನಿಜವಾಗಿಯೂ ದುಃಖಕರವಾಗಿದೆ. ಪರಂಪರಾನುಗತವಾಗಿ ಇವರು ಆರಾಧಿಸುತ್ತಿರುವ ದೇವರನ್ನು ಬಿಟ್ಟು, ಉಳಿದ ದೇವರನ್ನು ಕರೆಯಲು ಇವರಿಗೆ ಬಲಾತ್ಕಾರವಾದ ತರಬೇತಿಯನ್ನು ನೀಡಲಾಗುತ್ತಿದೆ. ಆದರೆ ಏನೂ ಅರಿಯದ ಈ ಜನರನ್ನು ಬಲಾತ್ಕಾರವಾಗಿ ಅನ್ಯಮತೀಯರ ಪೂಜಾಪದ್ಧತಿಯನ್ನು ಆಚರಿಸುವಂತೆ ಮಾಡಿದರೂ ತಮ್ಮ ಹೃದಯಾಂತರಾಳದ ಮನಸ್ಸಿನ ವೇದನೆಯನ್ನು ಸಹಿಸಲಾಗದೆ ದಿನಾ ಹೀಗೆ ಪ್ರಾರ್ಥಿಸುತ್ತಿದ್ದಾರೆ: "ಹೇ ರಾಂಗೋ ಜುಬಾನ್, ನಮ್ಮನ್ನು ಈ ಸಮಸ್ಯೆಗಳಿಂದ ಪಾರುಮಾಡು. ನಮ್ಮನ್ನು ರಕ್ಷಿಸು. ನಮಗೆ ಶಾಂತಿಯನ್ನು ಕೊಡು."

ಈ ಸರಳ ಜೀವಿಗಳ ಪ್ರಾರ್ಥನೆಯೊಂದಿಗೆ ಭಾರತದ ಉಳಿದ ಎಲ್ಲ ನಾಡಿನ ಜನರೂ ಧ್ವನಿ ಸೇರಿಸಿ ಪ್ರಾರ್ಥಿಸುವಂತಾಗಲಿ. ಇವರ ಸಮಸ್ಯೆಗಳನ್ನು ಅರಿತು ಅದನ್ನು ಬಗೆಹರಿಸಲು ಸಹಾಯ ಮಾಡಲಿ.

[*The Noetis* By Parul Dutta and *Arunachal Through The Ages* By J.N. Chowdhury ಈ ಎರಡು ಗ್ರಂಥಗಳ ಸಹಾಯದಿಂದಲೂ, ಇಲ್ಲಿಯ ರಾಮಕೃಷ್ಣ ಶಾರದಾ ಮಿಷನ್ನಿನ ಸಂಪರ್ಕವಿದ್ದ ಈ ನಾಡಿನ ಕೆಲವು ವ್ಯಕ್ತಿಗಳ ಅನುಭವವನ್ನೂ ಆಧರಿಸಿ ಈ ಲೇಖನವನ್ನು ಬರೆಯಲಾಗಿದೆ.]

## ಪ್ರಹಸನ ಪ್ರಸಂಗ

ಸಂತಾ ಸಿಂಗನು ವಿದ್ಯುತ್ ಗರಗಸದಿಂದ ಮರವನ್ನು ಕತ್ತರಿಸುತ್ತಿದ್ದನು. ಅಚಾತುರ್ಯದಿಂದ ಅವನ ಹತ್ತೂ ಬೆರಳುಗಳು ಕತ್ತರಿಸಲ್ಪಟ್ಟವು. ಅವನು ಕೂಡಲೇ ಡಾಕ್ಟರ ಹತ್ತಿರ ಓಡಿದನು.

ಡಾಕ್ಟರ್ : "ನಿನ್ನ ಬೆರಳುಗಳನ್ನು ಕೊಡು. ಪ್ರಯತ್ನಿಸಿ ನೋಡುತ್ತೇನೆ."

ಸಂತ ಸಿಂಗ್ : "ಬೆರಳುಗಳೇ ಇಲ್ಲ ಡಾಕ್ಟ್ರೇ. ಅದಕ್ಕೇ ನಿಮ್ಮ ಹತ್ರ ಬಂದದ್ದು."

ಡಾಕ್ಟರ್ : "ಬೆರಳುಗಳೇ ಇಲ್ಲ ಅಂದ್ರೆ ಹೇಗಯ್ಯ! ನೀನು ಅವುಗಳನ್ನು ತರಬೇಕಾಗಿತ್ತು! ಮೈಕ್ರೋಸರ್ಜರಿ ಮಾಡಿ ಅವುಗಳನ್ನು ಜೋಡಿಸಬಹುದಿತ್ತು!"

ಸಂತಾ ಸಿಂಗ್ : "ಆದರೆ ಡಾಕ್ಟ್ರೇ, ಅವುಗಳನ್ನು ನಾನು ಹೇಗೆ ಹೆಕ್ಕಿಕೊಂಡು ಬರುವುದು?"

**ಮನಸ್ಸು ಹಸ್ತವಿದ್ದಂತೆ, ಬೆರಳುಗಳೇ ದಶೇಂದ್ರಿಯಗಳು. ಬೆರಳುಗಳಿಲ್ಲದೆ ವಸ್ತುಗಳನ್ನು ಗ್ರಹಿಸಲು ಆಗದಿರುವಂತೆ ಇಂದ್ರಿಯಗಳ ಸಹಾಯವಿಲ್ಲದೆ ಮನಸ್ಸು ವಿಷಯಗ್ರಹಣ ಮಾಡಲಾರದು.**

❖ ❖ ❖

ಒಬ್ಬ ವ್ಯಕ್ತಿ ನೇತ್ರಚಿಕಿತ್ಸಕನ ಬಳಿಗೆ ಹೋದನು. ವೈದ್ಯನು ಅವನ ಕಣ್ಣನ್ನು ಪರೀಕ್ಷಿಸಿ ಅವನಿಗೊಂದು ಕನ್ನಡಕವನ್ನು ಕೊಟ್ಟನು. ಆ ವ್ಯಕ್ತಿ ವೈದ್ಯನನ್ನು ಕೇಳಿದ, "ಡಾಕ್ಟ್ರೇ, ಈ ಕನ್ನಡಕ ಹಾಕಿಕೊಂಡರೆ ನಾನು ಓದಬಹುದಲ್ಲವೆ?"

"ಖಂಡಿತ. ನಿಮಗೆ ಓದಲು ಸಾಧ್ಯವಾಗಲೇ ಬೇಕು" , ವೈದ್ಯನು ಭರವಸೆಯಿಂದ ನುಡಿದ.

"ಆಹಾ! ಎಂಥ ಭಾಗ್ಯ! ನಾನು ಓದಲು ಕಲಿಯಬಲ್ಲೆ ಎಂದೇ ಎಣಿಸಿರಲಿಲ್ಲ" ಆ ವ್ಯಕ್ತಿ ಆನಂದಾಶ್ಚರ್ಯದಿಂದ ನುಡಿದ.

**ಹೀಗೆಯೇ ನಾವು ಬಾಹ್ಯ ಪರಿಕರಗಳಿಂದ ಹೆಚ್ಚು ಸುಖವನ್ನು ಅಥವಾ ಜ್ಞಾನವನ್ನು ಪಡೆಯಬಹುದೆಂದು ಭ್ರಮಿಸುತ್ತೇವೆ. ಆಂತರಿಕ ತಿಳಿವಳಿಕೆ ಇಲ್ಲದಿದ್ದರೆ ಹೊರಗಿನ ಪರಿಕರಗಳಿಂದ ಯಾವ ಜ್ಞಾನವನ್ನೂ ಪಡೆಯಲಾಗುವುದಿಲ್ಲ. ಕೇವಲ ಬಾಹ್ಯ ಪರಿಕರಗಳ ವೃದ್ಧಿಯಿಂದ ಜ್ಞಾನವೃದ್ಧಿಯಾಗುವುದಿಲ್ಲ. ಹಾಗೆಯೇ ಬಾಹ್ಯ ಸುಖಸಾಧನಗಳಿಂದ ಸುಖ ವೃದ್ಧಿಸುವುದಿಲ್ಲ.**

❖ ❖ ❖

ರೋಗಿ : "ಡಾಕ್ಟ್ರೇ, ನಾನು ಈ ರೋಗದಿಂದ ಗುಣವಾಗುವ ಸಾಧ್ಯತೆ ಎಷ್ಟಿದೆ?"

ವೈದ್ಯ : "ನೂರಕ್ಕೆ ನೂರು ಗುಣವಾಗುವ ಛಾನ್ಸ್ ಇದೆ."

ರೋಗಿ : "ಹೌದೇ !"

ವೈದ್ಯ : "ಖಂಡಿತ! ವೈದ್ಯಕೀಯ ವರದಿಯ ಪ್ರಕಾರ ಈ ರೋಗಕ್ಕೆ ಒಳಗಾದವರಲ್ಲಿ ಹತ್ತಕ್ಕೆ ಒಂಬತ್ತು ಜನ ಸಾಯುತ್ತಾರೆ. ನಾನು ಚಿಕಿತ್ಸೆ ಮಾಡಿದವರ ಪೈಕಿ ನೀವು ಹತ್ತನೆಯವರು, ಉಳಿದ ಒಂಬತ್ತು ಜನರು ಆಗಲೆ ಮೃತಪಟ್ಟಿದ್ದಾರೆ."

**ಈ ಪ್ರಪಂಚದಲ್ಲಿ ಅನೇಕರು ಅನೇಕ ಬಗೆಯ ಭರವಸೆಗಳನ್ನು ನೀಡುತ್ತಾರೆ. ರಾಜಕಾರಣಿಗಳು ದಕ್ಷ ಆಡಳಿತದ ಭರವಸೆಯನ್ನು ನೀಡುತ್ತಾರೆ, ವೈದ್ಯರು ಉತ್ತಮ ಆರೋಗ್ಯದ ಭರವಸೆಯನ್ನು ನೀಡುತ್ತಾರೆ, ಆರ್ಥಿಕ ಸಂಸ್ಥೆಗಳು ನೆಮ್ಮದಿಯ ಭವಿಷ್ಯದ ಭರವಸೆಯನ್ನು ನೀಡುತ್ತವೆ. ಆದರೆ ಈ ಎಲ್ಲ ಭರವಸೆಗಳೂ ಹುಸಿ. ಆಧ್ಯಾತ್ಮಿಕ ಜೀವನದಲ್ಲೇ ನಿಜವಾದ ಭರವಸೆ ಇರುವುದು.**